**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**<u>ಎಸ್.ಸಿ. ನಂಃ 10007/2023</u>**

ಚಾಸಾ ಃ **34**

**ಪ್ರಾಸಾ ಃ 12**

| | | |
|---|---|---|
| **ಹೆಸರು** | **ಃ** | **ಡಾ॥ ಕಿರಣ್ ಜೆ.** |
| **ತಂದೆಯ ಹೆಸರು** | **ಃ** | **ಜಯರಾಮ್** |
| **ವಯಸ್ಸು** | **ಃ** | **58 ವರ್ಷ** |
| **ವೃತ್ತಿ** | **ಃ** | **ವೈದ್ಯರು, ಚಿಗುರು ಆಸ್ಪತ್ರೆ, ರಾಜಾನುಕುಂಟೆ.** |
| **ವಾಸ** | **ಃ** | **ಬೆಂಗಳೂರು.** |

**ಈ ದಿನ ದಿನಾಂಕಃ 07.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ಕಳೆದ 7 ವರ್ಷಗಳಿಂದ ನಾನು ರಾಜಾನುಕುಂಟೆಯ ಚಿಗುರು ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 17.01.2023 ರಂದು ರಾತ್ರಿ 09.30 ಗಂಟೆಯ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಸಮಯದಲ್ಲಿ ಮಧುಚಂದ್ರ ಎಂಬ ಗಾಯಾಳುವನ್ನು ರಾಜಾನುಕುಂಟೆ ಪೊಲೀಸ್ ಠಾಣೆಯ ಪೊಲೀಸ್ ಪ್ರದೀಪ್ ಎನ್ನುವವರು ಅದೇ ದಿನ ಮದ್ಯಾಹ್ನ 03.15 ಗಂಟೆಗೆ ಸಮಯದಲ್ಲಿ ಹಲ್ಲೆ ಮಾಡಿರುತ್ತಾರೆಂಬ ಕಾರಣದ ಮೇರೆಗೆ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಂಬಂದಿರುತ್ತವೆ.

"1. ಅವರ ಬಲಗೈಯನ 3, 4 ಮತ್ತು 5 ರ ಬೆರಳುಗಳಲ್ಲಿ ಕೊಯ್ದ ಗಾಯಗಳು ಕಂಡುಬಂದಿರುತ್ತದೆ."

3. ಮೇಲೆ ಹೇಳಿದ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನೋಡಿ ಗುರುತಿಸುತ್ತೆನೆ. ಅದನ್ನು ನಿಪಿ-28 ಎಂದು ಗುರುತಿಸಲಾಯಿತು. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಪಿ-28 (ಎ) ಎಂದು ಗುರುತಿಸಲಾಯಿತು. ಆ ದಿನ ನಾನು ಪರೀಕ್ಷಿಸಿದ ಗಾಯಾಳು ವ್ಯಕ್ತಿಯನ್ನು ಇಂದು ನೋಡಿ ಗುರುತಿಸುತ್ತೇನೆ. ಸದರಿ ಆರೋಪಿಯನ್ನು ಜೆ.ಸಿ ಯಿಂದ ವಿಸಿ ಮೂಲಕ ಹಾಜರುಪಡಿಸಿದ್ದು ಸಾಕ್ಷಿದಾರರು ವಿಸಿ ಯಲ್ಲಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರಿರುತ್ತಾರೆ. ಯಾರು ಪ್ರತಿನಿಧಿಸಿರವುದಿಲ್ಲ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ